ಅಮ್ಮನನ್ನು ಬೆಚ್ಚಿ ಬೀಳಿಸಿದ್ದರು. “ಇನ್ನು ನೀವು ಯಾವುದಕ್ಕೂ ಹುಷಾರಾಗಿರಿ’’ ಎನ್ನುವ ಎಚ್ಚರಿಕೆಯ ಗಂಟೆಯನ್ನು ಬಾರಿಸಿ ಬೀಳ್ಕೊಟ್ಟಿದ್ದು ಇನ್ನಷ್ಟು ಚಿಂತೆಗೀಡು ಮಾಡಿತ್ತು.

ಮಾಮಿ ಕಾಲು ನೋವೆಂದು ವಾರದಲ್ಲಿ ಮೂರ್ನಾಲ್ಕು ಬಾರಿ ಹೆಚ್ಚಿನ ಬಟ್ಟೆ, ರಗ್ಗುಗಳನ್ನು ಒಗೆದು, ಬುಟ್ಟಿಯಲ್ಲಿ ಹೊತ್ತುಕೊಂಡು ಮೇಲೆ ಬರುತ್ತಿದ್ದಳು. ಮುಂಜಾನೆ ಎಂಟಕ್ಕೇ ಅಮ್ಮ, ಮನೆ ಕೆಲಸದ ಗಂಗಮ್ಮನಿಂದ ನಮ್ಮ ಬಟ್ಟೆಗಳನ್ನು ಒಗೆಸಿ, ಒಣಗಿಸಿ, ಒಳಗೆ ಇಟ್ಟಿರುತ್ತಿದ್ದಳು. ಹೀಗಾಗಿ, ಅವಳ ಕೈಗೆ ಅವು ಸಿಗುವ ಅವಕಾಶಗಳು ಇಲ್ಲದಂತಾಗುತ್ತಿದ್ದವು. ಆದರೆ, ಭಾನುವಾರಗಳಂದು ಹೆಚ್ಚಿನ ಬಟ್ಟೆ ಬರೆ, ಬೆಲೆ ಬಾಳುವ ಸೀರೆ, ಬೆಡ್‌ಶೀಟುಗಳು ಮಹಾ ಮಜ್ಜನ ಮಾಡಿಸಿಕೊಂಡು ನಮ್ಮ ಅಂಗಳ ಧೋಬಿ ಘಾಟಿನಂತೆ ಕಂಗೊಳಿಸಿದಾಗ, ನಾವು ಮಕ್ಕಳು ಬೀಟ್ ಪೊಲೀಸರಂತೆ ಆಗಾಗ ಗಸ್ತು ತಿರುಗಿ ಬಟ್ಟೆಗಳ ಹಾಜರಾತಿ ತೆಗೆದುಕೊಂಡು ಎಲ್ಲ ಸರಿಯಾಗಿದೆ ಎಂದು ದೃಢಪಡಿಸಿಕೊಳ್ಳುತ್ತಿದ್ದೆವು. ಒಮ್ಮೆ ಕೆಳಗಿನ ಮನೆಯ ಮಾಮಿಗೆ ಕೇಳಿಸುವಂತೆ ಅಮ್ಮ, ತಮ್ಮ ತಂದೆ ಪೊಲೀಸ್ ಇನ್‌ಸ್ಪೆಕ್ಟರಾಗಿ ನಿವೃತ್ತರಾಗಿದ್ದರೂ ಬೆಂಗಳೂರಿನ ಪೊಲೀಸರೆಲ್ಲರ ಪರಿಚಯ ಅವರಿಗಿದೆಯೆಂದು, ಅಷ್ಟೇ ಅಲ್ಲದೆ, ಅಮ್ಮನ ಅಣ್ಣ ಸುಪ್ರೀಂ ಕೋರ್ಟಿನಲ್ಲಿ ಲಾಯರು ಎಂದೆಲ್ಲ ಕಳ್ಳ–ಖದೀಮರನ್ನು ಹಿಡಿದ ಉದಾಹರಣೆಗಳೊಂದಿಗೆ ಕೆಲಸದವಳ ಮುಂದೆ (ಕಳ್ಳರನ್ನು ಹೆದರಿಸುವ ಭ್ರಮೆಯಲ್ಲಿ) ಎತ್ತರದ ಧ್ವನಿಯಲ್ಲಿ ಹೇಳುತ್ತಿದ್ದುದೂ ಉಂಟು!

ಈ ಡೈಲಾಗಿಗೆ ಪ್ರತ್ಯುತ್ತರವಾಗಿ ಮುಂದೆ ಕೆಲವು ದಿನಗಳ ಅನಂತರ ಈ ಪ್ರಸಂಗ ನಡೆಯಿತು. ಅಪರೂಪಕ್ಕೆ ಬಂದಿದ್ದ ನೆಂಟರ ಚಪ್ಪಲಿಗಳು ಮನೆ ಮುಂದಿನಿಂದ ತಮಗೆ ತಾವೇ ನಡೆದುಕೊಂಡು ಹೋಗಿ ಮಾಯವಾಗಿದ್ದು ನಮ್ಮನ್ನು ಭಯಂಕರ ಮುಜುಗರಕ್ಕೀಡು ಮಾಡಿತ್ತು. ಇದಷ್ಟೇ ಅಲ್ಲದೆ, ನಿತ್ಯವೂ ನಸುಕಿನಲ್ಲಿ ನಾನು ಅಕ್ಕ ಡ್ರಮ್ಮಿಗೆ ನೀರು ತುಂಬಿಸಲು ಬಳಸುತ್ತಿದ್ದ ಹಿತ್ತಾಳೆ ಗುಂಡಿಯನ್ನು ಅಲ್ಲೇ ನಳದ ಕೆಳಗಿಟ್ಟು, ಅಮ್ಮನ ಕಾಫೀ ಕರೆಗೆ ನಾವು ಓಗೊಟ್ಟು ಬರುವುದರೊಳಗೆ ಮಾಮಿ ಎಗರಿಸಿಬಿಟ್ಟಿದ್ದಳು!

ಆಗಂತೂ ಅಮ್ಮ ಸಿಟ್ಟಿನಿಂದ ಅಂಗಳದಲ್ಲಿ ನಿಂತು, ಹೊಸ ಹೊಸ ಶಬ್ದಾಲಂಕಾರ ಪ್ರಯೋಗಗಳಿಂದ (ಪರಿಚಯದ) ಕಳ್ಳರಿಗೆ ಹಿಡಿ ಶಾಪ ಹಾಕುತ್ತ ಪ್ರಾತಃಸ್ಮರಣೆ ಮಾಡಿದ್ದರು. ನಾನು ಅಕ್ಕ ಇಬ್ಬರೂ ನಮ್ಮ ಅಜಾಗರೂಕತೆಗೆ ನಾವೇ ಹಳಿದುಕೊಂಡು, ಅಮ್ಮನಿಂದಲೂ ಬೈಗುಳ ತಿಂದು ಅಪರಾಧಿ ಪ್ರಜ್ಞೆಯಲ್ಲಿ ಬೇಯುತ್ತ ಶಾಲೆಗೆ ಹೋಗಿದ್ದೆವು! ಹಿತ್ತಾಳೆ ಗುಂಡಿ ಹುಡುಕಿ ಕೊಡಲು ಅದ್ಯಾವ ಲಾಯರಪ್ಪ ಬರ್ತ್ತಾನೆ ಎಂದು ಮಾಮಿ ಕಿಸಕ್ಕನೆ ನಕ್ಕಿರಬಹುದು. ನಮ್ಮ ವಠಾರದಲ್ಲಾಗ ಸಿಸಿಟೀವಿ ಕ್ಯಾಮೆರಾ ಇದ್ದಿದ್ದಿರೆ ಮಾಮಿ ಕಥೆ ಬೇರೆಯೆ ಆಗಿರುತಿತ್ತು ಅನ್ನಿ!

ಅಂತೂ ಕಳ್ಳ ಮಾಮಿ ತನ್ನ ಕಸುಬನ್ನು ಆಗಾಗ ಪ್ರದರ್ಶಿಸಿ “ಚೋರಿ ಚೋರಿ ಚುಪ್ಕೆ ಚುಪ್ಕೆ’’ ಆಟವಾಡುವುದು, ನಾವು ಬಕರಾ ಆಗುತ್ತಾ ಹಳಹಳಿಸುವುದು ಆಗಾಗ ನಡೆಯುವ ಪ್ರಕ್ರಿಯೆಗಳು! ಮತ್ತೊಂದು ಭಾನುವಾರ ಬೆಳಗ್ಗೆ ತರಕಾರಿ ಅಂಗಡಿ ಮಂಜುವಿನ ಮಡದಿ ಚಂದ್ರಿಯ ಕೂಗಾಟದ ಧ್ವನಿಗಳು ಕಿವಿಗಪ್ಪಳಿಸಿದ್ದವು. ಮಗಳು ಪುಟ್ಟಿಯ ಹುಟ್ಟುಹಬ್ಬಕ್ಕೆ ಕೊಂಡ ಬೆಳ್ಳಿ ಕಾಲ್ಗೆಜ್ಜೆ ಆಡುವಾಗ ಸಡಿಲವಾಗಿ ಕಳಚಿ ಬಿದ್ದದ್ದು, ದಶ ದಿಕ್ಕುಗಳಲ್ಲಿ ತನ್ನ ಕಳ್ಳ ದೃಷ್ಟಿಯನ್ನಿಟ್ಟ ಮಾಮಿಗಂತೂ ಇದು ಹೋಳಿಗೆ ಜಾರಿ ತುಪ್ಪದಲ್ಲಿ ಬಿದ್ದಂತಾಗಿತ್ತು. ಮುಂದಿನ ಸೀನು ಚಂದ್ರಿ ಮಾಮಿಯನ್ನು ಕಳ್ಳಿಯೆಂದು ಜರಿಯುವ ಧೈರ್ಯ ಮಾಡಿದ್ದೂ ಅಲ್ಲದೆ ಕೂಗಾಡಿ ವಠಾರದಲ್ಲಿ (ನಾವು ಕಂಡರಿಯದ) ಸಂಚಲನವನ್ನೆ ಸೃಷ್ಟಿಸಿದ್ದಳು. ವಠಾರದ ಮಹಾಭಾರತ ಯುದ್ಧದ ವಾಸನೆ ಸ್ವಾಮಿಗೂ ಬಡಿದು ಯಾವುದೆ ಸಾಕ್ಷ್ಯಾಧಾರಗಳಿಲ್ಲದೆ ಆರೋಪ ಹೊರಿಸಿದ್ದಕ್ಕಾಗಿ ಚಂದ್ರಿಯ ಜನ್ಮ ಜಾಲಾಡಿ ಆವಾಜ್ ಹಾಕಿದ್ದ! ಮಾಮಿಯ ಮಾಟ–ಮಂತ್ರದ ಭಯದ ನೆರಳು ಚಂದ್ರಿಗೆ ಹಗಲು ಇರುಳು ಕಾಡಿತ್ತು!